ವಿಶ್ವವಿದ್ಯಾಲಯಗಳಲ್ಲಿ ಪಠ್ಯ ಮತ್ತು ಪ್ರಾಯೋಗಿಕ ವಿಷಯವಾಗಿ ಕಲಿಸುತ್ತಿವೆ.

ಇ) ಇಲ್ಲ.

ಈ) ಭಾರತೀಯ ಪರಂಪರೆಯನ್ನು ಪ್ರತಿನಿಧಿಸುವ ವಿಷಯಗಳಾದ, ಸಂಸ್ಕೃತ, ಜಾನಪದ, ಸಂಗೀತ, ನೃತ್ಯ ಕಲೆಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಲಾಗಿದೆ.

ಉ) ಹೌದು.

ಸಂಸ್ಕೃತ, ಜಾನಪದ, ಸಂಗೀತ, ನೃತ್ಯ ಕಲೆಗಳನ್ನು ಅಳವಡಿಸಲು ಪ್ರತ್ಯೇಕವಾದ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಗಿದ್ದು, ಸದರಿ ವಿಶ್ವವಿದ್ಯಾಲಯಗಳು ತಮ್ಮ ಪರಿನಿಯಮಾವಳಿಯಂತೆ ಪಠ್ಯಕ್ರಮಗಳನ್ನು ಅಳವಡಿಸಿರುತ್ತವೆ.

ಪ್ರಾಥಮಿಕ ಶಿಕ್ಷಣದಲ್ಲಿ ಯೋಗ ಅಳವಡಿಕೆ

3141 (3370); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಪ್ರಾಥಮಿಕ ಶಿಕ್ಷಣದಲ್ಲಿಯೂ ಯೋಗ ವಿಷಯವನ್ನು ಐಚ್ಛಿಕವಾಗಿ ಅಳವಡಿಸಲು ಸರ್ಕಾರ ನಿರ್ಧರಿಸಿದೆಯೇ (ವಿವರ ಒದಗಿಸುವುದು);

ಆ) ಪ್ರಾಥಮಿಕ ಶಿಕ್ಷಣದಲ್ಲಿ ಯೋಗವನ್ನು ಅಳವಡಿಸುವುದಾದರೆ ಅದು ಯಾವ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರಲಿದೆ;

ಇ) ಭಾರತೀಯ ಸನಾತನ ಪದ್ಧತಿಯಾಗಿರುವ ಯೋಗವನ್ನು ಐಚ್ಛಿಕ ವಿಷಯವಾಗಿ ಅಳವಡಿಸುವ ಬದಲು ಕಡ್ಡಾಯವಾಗಿ ಅಳವಡಿಸಬಾರದೇಕೆ; ಸ್ಪಷ್ಟೀಕರಿಸುವುದು;

ಈ) ಯೋಗದ ಜೊತೆ ಇನ್ನೂ ಅನೇಕ ಭಾರತೀಯ ಸನಾತನ ಕಲೆಯನ್ನು ಶಿಕ್ಷಣದ ಮೂಲಕ ಅಳವಡಿಸಿದರೆ ಮಕ್ಕಳ ಜ್ಞಾನಾರ್ಜನೆಗೆ ಕಾರಣವಾಗುವುದಿಲ್ಲವೇ (ವಿವರ ಒದಗಿಸುವುದು)?

ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ & ಪ್ರೌಢ ಶಿಕ್ಷಣ ಸಚಿವರು)

ಅ) ಇಲ್ಲ.

ಪ್ರಾಥಮಿಕ ಶಿಕ್ಷಣದಲ್ಲಿ ಶ್ರೀ ವೈದ್ಯನಾಥನ್ ವರದಿಯನ್ವಯ ಯೋಗ ಶಿಕ್ಷಣವು ದೈಹಿಕ ಶಿಕ್ಷಣ ಭಾಗವಾಗಿರುತ್ತದೆ. 2010 ರಲ್ಲಿಯೇ ಯೋಗದ ಪಠ್ಯಕ್ರಮ ಮತ್ತು ಪಠ್ಯವಸ್ತುವನ್ನು ಸಿದ್ಧಪಡಿಸಲಾಗಿದ್ದು, ಶಾಲೆಗಳಲ್ಲಿ 1–10 ನೇ ತರಗತಿ ಪಠ್ಯಕ್ರಮದಲ್ಲಿ ಅಳವಡಿಸಿ ಕಲಿಸಲಾಗುತ್ತಿದೆ. 6–10 ನೇ ತರಗತಿಯ ದೈಹಿಕ ಶಿಕ್ಷಣ ವಿಷಯದಲ್ಲಿ ಯೋಗ ವಿಷಯವನ್ನು ಅಳವಡಿಸಿ, ಪಠ್ಯಪುಸ್ತಕ ರಚಿಸಿ ಅದನ್ನು ಆಧರಿಸಿ ಕಲಿಕೆ ನಡೆಸಲಾಗುತ್ತಿದೆ.

ಆ) ಪ್ರಾಥಮಿಕ ಶಿಕ್ಷಣದಲ್ಲಿ ಯೋಗವನ್ನು ಈಗಾಗಲೇ ಅಳವಡಿಸಿ, 2011–12 ರಿಂದಲೇ ಜಾರಿಗೆ ತರಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಹೌದು.

ಸಂಗೀತ, ಚಿತ್ರಕಲೆ, ಮುಂತಾದ ವಿಷಯಗಳನ್ನು ಶಿಕ್ಷಣದ ಮೂಲಕ ಅಳವಡಿಸಿ ಬೋಧಿಸಲಾಗುತ್ತಿದೆ.

ಕಾಗದ ರಹಿತವಾಗಿಸುವುದು

3142 (3371); ಡಾ॥ ಸುಧಾಕರ್ ಕೆ. (ಚಿಂತಾಮಣಿ)

ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಕಾಗದ ರಹಿತವಾಗಿಸಲಾಗಿದೆಯೇ? (ವಿವರ ಒದಗಿಸುವುದು);

ಆ) ರಾಜ್ಯಾದ್ಯಂತ ಇಲಾಖೆಯ ಎಲ್ಲಾ ಶಾಖೆಗಳಲ್ಲೂ ಈ ಸಾಧನೆ ಆಗಿದೆಯೇ? ಕಾಗದ ಬಳಕೆ ಮಾಡುತ್ತಿರುವ ಸ್ಥಳಗಳ ಹೆಸರುಗಳನ್ನು ತಿಳಿಸುವುದು.